2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ: 67/2026

ಪಿ.ಡಬ್ಲುಃ 3 ಸಿಡಬ್ಲುಃ 3

ಸಾಕ್ಷಿಯ ಹೆಸರು : ಎರಿಸ್ವಾಮಿ

ತಂದೆಯಹೆಸರು : ರಾಮಂಜಿನಿ

ವಯಸ್ಸು : 30 ವರ್ಷ

ವೃತ್ತಿ : ಚಾಲಕ

ವಾಸಸ್ಥಳ : ತೋರಣಗಲ್ಲು

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 19.08.2026.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನನಗೆ ಚಾಸಾ-1 ಮತ್ತು 2 ರವರ ಪರಿಚಯವಿಲ್ಲ. ನಾನು ಈಗ ನೋಡುತ್ತಿರುವ ನಿಪಿ-2 ಪಂಚನಾಮೆಯಲ್ಲಿ ಹಾಗು ನಿಪಿ-3 ನಕಾಶೆಯಲ್ಲಿ ನನ್ನ ಸಹಿಗಳು ಇವೆ. ಸಾಕ್ಷಿಯ ಸಹಿಗಳನ್ನು ನಿಪಿ-2(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಪೊಲೀಸ್ ನೋಟಿಸ್ ಆಗಿದ್ದು ಅದನ್ನು ನಿಪಿ-7 ಎಂದು ಹಾಗು ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ನಿಪಿ-2, 3 ಮತ್ತು 7 ರಲ್ಲಿ ನನ್ನ ಸಹಿಗಳನ್ನು ಪೊಲೀಸರು ಈಗ ಸುಮಾರು 6 ತಿಂಗಳ ಹಿಂದೆ ನಮ್ಮ ಊರಿಗೆ ಬಂದಿದ್ದ ಸಮಯಲ್ಲಿ ಪಡೆದಿದ್ದರು. ಯಾವ ಉದ್ದೇಶಕ್ಕಾಗಿ ನನ್ನ ಸಹಿಗಳನ್ನು ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-2 ರಂತೆ ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿಲ್ಲ. ನಿಪಿ-2 ಮತ್ತು 3 ರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನ್ಯಾಯಾಲಯದ ಮುಂದೆ ನೋಡುತ್ತಿರುವ ಚಾಕುವನ್ನು ನಾನು ಈ ಮೊದಲು ನೋಡಿಲ್ಲ. ಅದನ್ನು ನನ್ನ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಮಾಡಿಕೊಂಡಿಲ್ಲ. ನಾನು ಈಗ ನೋಡುತ್ತಿರುವ ನಿಪಿ-4 ಮತ್ತು 5 ಪೊಟೋಗಳಲ್ಲಿ ನಾನು ಇದ್ದೇನೆ. ಪೊಲೀಸರು ನನ್ನನ್ನು ಎಲ್ಲಿಯೋ ಕರೆದುಕೊಂಡು ಹೋಗಿ ನಿಲ್ಲಿಸಿಕೊಂಡು ಸದರಿ ಪೊಟೋಗಳನ್ನು ತೆಗೆಸಿದ್ದರು. ಯಾವ ಉದ್ದೇಶಕ್ಕೆ ಸದರಿ ಪೋಟೋಗಳನ್ನು ತೆಗೆಸಿದ್ದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

ದಿನಾಂಕ **03.02.2026** ರಂದು ಸಂಜೆ **06.30** ರಿಂದ **07.30** ರವರೆಗೆ ಪೊಲೀಸರು ನನ್ನನು ಮತ್ತು ಚಾಸಾ-**2** ರವರನ್ನು ತೋರಣಗಲ್ಲು ಗ್ರಾಮದ ಜನತಾ ಕಾಲೋನಿಯಲ್ಲಿ ಇರುವ ಚಾಸಾ-**1** ರವರ ಮನೆಯ ಮುಂದೆ ಪಂಚರೆಂದು ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-**1** ಹಾಜರಿದ್ದು ತೋರಿಸಿದ ಕೃತ್ಯ ಸ್ಥಳದಲ್ಲಿ ಪೊಲೀಸರು ನಮ್ಮ ಸಮಕ್ಷಮ ನನಗೆ ಈಗ ಓದಿ ಹೇಳಿದಂತೆ ನಿಪಿ-**2** ರಂತೆ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಸಮಯದಲ್ಲಿ ನಾನು ಈಗ ನೋಡುತ್ತಿರುವ ಚಾಕುವನ್ನು ಜಪ್ತು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ನಿಪಿ-**3** ರಂತೆ ನಕಾಶೆಯನ್ನು ತಯಾರಿಸಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-**4** ಮತ್ತು **5** ರಂತೆ ಪೊಟೊವನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ನಿಪಿ-**2** ರ ಸಂಗತಿ ತಿಳಿದುಕೊಂಡು ನಾನು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

ನಿಪಿ-**2** ರಂತೆ ನನ್ನ ಸಮಕ್ಷಮ ಪಂಚನಾಮೆಗಳನ್ನು ಮಾಡಿದ್ದರು ಸಹ ಮತ್ತು ನನಗೆ ಪ್ರಕರಣ ಬಗ್ಗೆ ಎಲ್ಲಾ ಮಾಹಿತಿ ಇದ್ದರು ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು ಆರೋಪಿತರ ಪರವಾಗಿ ವಕೀಲರಿಂದಃ</u>

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.